# 26

# ಸಬ್ಬತ್ ಕುರಿತು ಪ್ರಶ್ನೆಗಳು

# (12:1-14)

11ನೇ ಅಧ್ಯಾಯದಲ್ಲಿ ಪರಿಚಯ ಮಾಡಿರುವ ನಿರಾಕರಿಸುವಿಕೆಯ ಅಂಶವು ಈ ಅಧ್ಯಾಯದಲ್ಲಿ ಮುಂದುವರಿದಿದೆ. ಯೇಸುವಿಗೆ ಬಂದಿರುವ ವಿರೋಧಗಳನ್ನು ವಿವರಿಸಲು ಮತ್ತಾಯನು ಅನೇಕ ಉದಾಹರಣೆಗಳನ್ನು ಉಪಯೋಗಿಸಿದ್ದಾನೆ. ಈ ನಕರಾತ್ಮಕ ವಿಷಯದೊಂದಿಗೆ, ಮತ್ತಾಯನು ಸಹ ತನ್ನ ಓದುಗರಿಗೆ ನ್ಯಾಯತೀರ್ಪಿನ ಕುರಿತಾಗಿ ಸಿದ್ಧತೆ ಮಾಡುತ್ತಿದ್ದಾನೆ (ಅಧ್ಯಾಯಗಳು 13).

ಫರಿಸಾಯರೊಂದಿಗೆ ಮೂರು ವಿವಾದಸ್ಪದಗಳು (12:1-14, 22-37, 38-45) ಮತ್ತಾಯ ಬರೆದಿರುವ ವಿವರಣೆಯು ನಿರಾಕರಿಸುವ ವಿಷಯದಲ್ಲಿ ದೊಡ್ಡ ಭಾಗವಾಗಿದೆ. ಈ ವಿವಾದಗಳ ವಿಶೇಷತ್ವವು ಉಪವಾದ (12:15-21) ಮತ್ತು ಮುಕ್ತಾಯದ ನುಡಿಗಳಿಂದ ಒತ್ತಿ ಹೇಳಲಾಗಿದೆ (12:46-50).[1] ಫರಿಸಾಯರು "ಬುದ್ಧಿವಂತರು ಮತ್ತು ಜಾಣರು" ಆಗಿದ್ದರು ದೇವರು ಅವರಿಗೆ ತನ್ನ ಜ್ಞಾನವನ್ನು ಮರೆ ಮಾಡಿದ್ದಾನೆ (11:25). ಅವರ ಸಂಪ್ರದಾಯಗಳು, ಕಷ್ಟಕರವಾದ ನೊಗ ಮತ್ತು ಹೊರಲಾರದ ಹೊರೆ, ಯೇಸುವಿನ ಉಪದೇಶಗಳು ಕೊಡುವ ಬಹಳ ಸರಳವಾದ ಮತ್ತು ಹಗುರವಾದ ನೊಗಗೆ ಭಿನ್ನವಾಗಿವೆ (11:30).

ಸಬ್ಬತ್ತಿನ ಸಂಪ್ರದಾಯಗಳನ್ನು ಉಲ್ಲಂಘಿಸಿದ್ದರಿಂದ ಧಾರ್ಮಿಕ ಅಸಮಾದಾನವನ್ನು ಯೇಸುವಿನೆಡೆಗೆ ಹೆಚ್ಚಾಗಿ ಕೇಂದ್ರಿಕರಿಸಿದರು (ನೋಡಿರಿ ಯೋಹಾನ 5:1-18). ಆತನು ನಿಜವಾಗಿಯೂ ಸಬ್ಬತ್ತಿನ ಕುರಿತು ಇರುವ ನಿಯಮವನ್ನು ಎಲ್ಲಿಯೂ ಉಲ್ಲಂಘನೆ ಮಾಡಲಿಲ್ಲ, ಆದರೆ ಅನೇಕ ವರ್ಷಗಳಿಂದ ಯೆಹೂದ್ಯ ಬೋಧಕರಿಂದ ಸ್ಥಾಪಿಸಲ್ಪಟ್ಟಿರುವ ಮೌಖಿಕ ಸಂಪ್ರದಾಯಗಳನ್ನು ವಿರೋಧಿಸಿದರು. ಧರ್ಮಶಾಸ್ತ್ರವನ್ನು ಉಲ್ಲಂಘಿಸಬಾರದೆಂಬ ಪ್ರಯಾಸದಿಂದ, ಅವರು "ಸಬ್ಬತ್ ದಿನವನ್ನು ಪರಿಶುದ್ಧ ದಿನವನ್ನಾಗಿ ಆಚರಣೆ ಮಾಡಬೇಕು" ಎಂಬ ಸರಳವಾಗಿರುವ ಹೇಳಿಕೆಯನ್ನು ಜಟಿಲವಾಗಿ ಮಾಡಿದರು (ವಿಮೋಚನಕಾಂಡ 20:8). ಸಬ್ಬತ್‌ನ್ನು ಹೊರೆಯಾಗಿ ಅವರು ಪರಿವರ್ತಿಸಿದರು. ಯೇಸು ಮತ್ತು ಆತನ ಶಿಷ್ಯರು ಸಂಪ್ರದಾಯಗಳನ್ನು ಮುರಿದರು ಅದರಿಂದ ಇದನ್ನು ಅವರು ಪ್ರಶ್ನೆಯ ರೂಪದಲ್ಲಿ ಕೇಳಿದರು.

## ಕೊಯ್ಯುವದರಿಂದ ಅಪವಿತ್ರಗೊಳಿಸುವಿಕೆ? (12:1-8)

**1ಆ ಕಾಲದಲ್ಲಿ ಯೇಸು ಸಬ್ಬತ್ ದಿನದಲ್ಲಿ ಪೈರಿನ ಹೊಲಗಳನ್ನು ಹಾದುಹೋಗುತ್ತಿರುವಾಗ ಆತನ ಶಿಷ್ಯರು ಹಸಿದು ತೆನೆಗಳನ್ನು ಮುರುಕೊಂಡು ತಿನ್ನುತ್ತಿದ್ದರು. 2ಫರಿಸಾಯರು ಅದನ್ನು ಕಂಡು - ನೋಡು, ನಿನ್ನ ಶಿಷ್ಯರು ಸಬ್ಬತ್‌ದಿನದಲ್ಲಿ ಮಾಡಬಾರದ ಕೆಲಸವನ್ನು ಮಾಡುತ್ತಾರೆ ಎಂದು ಆತನಿಗೆ ಹೇಳಿದರು. 3ಆತನು ಅವರಿಗೆ - ದಾವೀದನು ತಾನೂ ತನ್ನ ಸಂಗಡ ಇದ್ದವರೂ ಹಸಿದಾಗ ಏನು ಮಾಡಿದನೆಂಬುದನ್ನು ನೀವು ಓದಲಿಲ್ಲವೋ. 4ಅವನು ದೇವರ ಮಂದಿರದೊಳಕ್ಕೆ ಹೋಗಿ ಯಾಜಕರು ಮಾತ್ರವೇ ಹೊರತು ತಾನಾಗಲಿ ತನ್ನ ಸಂಗಡ ಇದ್ದವರಾಗಲಿ ತಿನ್ನಬಾರದಾಗಿದ್ದ ನೈವೇದ್ಯದ ರೊಟ್ಟಿಗಳನ್ನು ತಿಂದನಲ್ಲವೇ. 5ಇದಲ್ಲದೆ ಸಬ್ಬತ್‌ದಿನದಲ್ಲಿ ಯಾಜಕರು ದೇವಾಲಯದಲ್ಲಿ ಸಬ್ಬತ್‌ದಿನವನ್ನು ಮಿಕ್ಕಾದ ದಿನಗಳಂತೆ**

**ಮಾಡಿದಾಗ್ಯೂ ಅವರು ತಪ್ಪಿಗೆ ಗುರಿಯಾಗುವದಿಲ್ಲ. ಇದನ್ನು ನೀವು ಧರ್ಮಶಾಸ್ತ್ರದಲ್ಲಿ ಓದಲಿಲ್ಲವೋ? [6]ಆದರೆ ಇಲ್ಲಿ ದೇವಾಲಯಕ್ಕಿಂತ ಹೆಚ್ಚಿನವನು ಇದ್ದಾನೆಂದು ನಿಮಗೆ ಹೇಳು ತ್ತೇನೆ. [7]ನನಗೆ ಯಜ್ಞವು ಬೇಡ, ಕರುಣೆಯೇ ಬೇಕು ಎಂಬುದರ ಅರ್ಥವನ್ನು ನೀವು ತಿಳಿದಿದ್ದರೆ ನಿರಪರಾಧಿಗಳನ್ನು ಅಪರಾಧಿಗಳೆಂದು ತೀರ್ಪುಮಾಡುತ್ತಿದ್ದಿಲ್ಲ. [8]ಮನುಷ್ಯಕುಮಾರನು ಸಬ್ಬತ್ ದಿನಕ್ಕೆ ಒಡೆಯನಾಗಿದ್ದಾನೆ ಎಂದು ಹೇಳಿದನು.**

**ವಚನ 1. ಈ ಸಮಯದಲ್ಲಿ** ಎನ್ನುವ ಅನಿಶ್ಚಿತೆಯ ವಾಕ್ಯಭಾಗವು ಕಥೆಯ ರೂಪದ ಸಾರಾಂಶವನ್ನು ಒಟ್ಟುಗೂಡಿಸಿ ರಚಿಸಲು ಮತ್ತಾಯನು ಉಪಯೋಗಿಸಿದ್ದಾನೆ (11:25; 14:1). **ಯೇಸು**ವಿನೊಂದಿಗೆ **ಆತನ ಶಿಷ್ಯರು ಪೈರಿನ ಹೊಲಗಳನ್ನು ಹಾದುಹೋಗುತ್ತಿದ್ದರು.** ಮೊದಲನೆಯ ಶತಮಾನದಲ್ಲಿ ಪಾಲೇಸ್ತೀನ ದೇಶದಲ್ಲಿರುವ ಈ ಹೊಲಗಳಿಗೆ ಬೇಲಿಯನ್ನು ಹಾಕುತ್ತಿರಲಿಲ್ಲ. ಅದರ ಬದಲಾಗಿ, ಅವರು ಚಿಕ್ಕದಾರಿಯಿಂದ ಹೊಲಗಳು ಬೇರ್ಪಡಿಸಲ್ಪಟ್ಟಿದ್ದವು, ಅವರ ಹೊಲಗಳ ಗಡಿಯನ್ನು ಕಲ್ಲುಗಳನ್ನು ಹಾಕಿ ಗುರುತಿಸುತ್ತಿದ್ದರು (ಧರ್ಮೋಪದೇಶಕಾಂಡ 19:14; 27:17; ಯೋಬ 24:2; ಜ್ಞಾನೋಕ್ತಿ 22:28; 23:10). ಅವರು ನಡೆದುಕೊಂಡು ಹೋಗುತ್ತಿರುವಾಗ ಹಸಿವೆಯಾಗಿದ್ದರಿಂದ ಶಿಷ್ಯರು ತೆನೆಗಳನ್ನು ಮುರಿದುಕೊಂಡು ತಿಂದರು. ಅವರು ಆ ರೀತಿಯಲ್ಲಿ ಮಾಡಿರುವದು ನಿಯಮದನುಸಾರವಾಗಿಯೇ ಮಾಡಿದರು. ಧರ್ಮೋಪದೇಶಕಾಂಡ 23:25 ಹೇಳುತ್ತದೆ, "ಮತ್ತೊಬ್ಬನ ಪೈರಿನಲ್ಲಿ ಹೋಗುತ್ತಿರುವಾಗ ತೆನೆಗಳನ್ನು ಕೈಯಿಂದ ಮುರುಕೊಳ್ಳಬಹುದೇ ಹೊರತು ಆ ಪೈರಿಗೆ ಕುಡುಗೋಲು ಹಾಕಬಾರದು." ಶಿಷ್ಯರು ಅಲ್ಲಿ ಕೊಯ್ಯುತ್ತಾ ಇಲ್ಲ; ಅವರು ತಮ್ಮ ಹಸಿವೆಯನ್ನು ತೀರಿಸಿಕೊಳ್ಳುತ್ತಿದ್ದಾರೆ.

**ವಚನ 2. ಫರಿಸಾಯರು ಶಿಷ್ಯರನ್ನು** ಯಾಕೆ ಸಬ್ಬತ್ ದಿನದಂದು ನಿಯಮಬಾಹಿರವಾದ ಕಾರ್ಯಮಾಡುತ್ತಾರೆ ಎಂದು ಆರೋಪಿಸಿದರು? ಸಬ್ಬತ್ ದಿನದಂದು ಕೆಲಸ ಮಾಡಬಾರದೆಂದು ನಿಯಮ ಹೇಳುತ್ತದೆ (ವಿಮೋಚನಕಾಂಡ 20:10; 34:21; ಯಾಜಕಕಾಂಡ 23:3; ಧರ್ಮೋಪದೇಶಕಾಂಡ 5:12-15), ಆದರೆ ಕೆಲವೊಂದು ಕೆಲಸಗಳನ್ನು ಮಾಡಬಾರದೆಂದು ಸೂಚಿಸಲಾಗಿದೆ. ಅಡಿಗೆ ಮಾಡಲು ಬೆಂಕಿಯನ್ನು ಹತ್ತಿಸಬಾರದು (ವಿಮೋಚನಕಾಂಡ 16:22-30; 35:3), ಕಟ್ಟಿಗೆಗಳನ್ನು ಒಟ್ಟಿಗೆ ಸೇರಿಸ ಬಾರದಾಗಿತ್ತು (ಅರಣ್ಯಕಾಂಡ 15:32-36), ಬಾರ ಹೊತ್ತು ಕೊಳ್ಳಬಾರದಾಗಿತ್ತು (ಯೆರೆಮೀಯ 17:21, 22), ಅಥವಾ ಯಾವುದೇ ರೀತಿಯ ವ್ಯವಹಾರ ಮಾಡಬಾರದಾಗಿತ್ತು (ನೆಹೆಮಿಯ 10:31; 13:15, 19).

ಆದಾಗ್ಯೂ, ರಬ್ಬಿಯರ ಸಂಪ್ರದಾಯಗಳು, ಬಹಳವಾಗಿ ವಿವರಿಸಿವೆ. ಈ ಎಲ್ಲಾ ಮಾನವರ ನಿಯಮಗಳು Mishnah ಗ್ರಂಥದಲ್ಲಿ ಸಂಗ್ರಹಿಸಲಾಗಿದೆ, ಮೂವತ್ತೊಂಬತ್ತು ಕಾರ್ಯಗಳನ್ನು ಸಬ್ಬತ್ ದಿನದಂದು ಮಾಡಬಾರದೆಂದು ಖಂಡಿಸಲಾಗಿದೆ - ಅದರಲ್ಲಿ ಕೊಯ್ಯುವದು, ಕುಟ್ಟುವದು, ತೂರುವದು, ಮತ್ತು ಕಾಳುಗಳನ್ನು ಕುಟ್ಟುವದು ಸಹ ಒಳಗೊಂಡಿದೆ.[2] ಶಿಷ್ಯರು ತೆನೆಗಳನ್ನು ತೆಗೆದುಕೊಂಡು ಉಜ್ಜುವದನ್ನು ಫರಿಸಾಯರು ಅದನ್ನು ಕೊಯ್ಯುವದು ಎಂಬಂತೆ ಪರಿಗಣಿಸಿದ್ದರು (ಲೂಕ 6:2) ಕುಟ್ಟಿದಂತೆ, ಹೊಟ್ಟನ್ನು ಗಾಳಿಯಲ್ಲಿ ತೂರಿದಂತೆ ಎನ್ನುವ ಅರ್ಥದಲ್ಲಿ ಅದನ್ನು ವಿವರಿಸಿದ್ದರು. ಬಹುಶಃ ಶಿಷ್ಯರು ಕಾಳುಗಳನ್ನು ಕೈಯಲ್ಲಿ ಹಾಕಿಕೊಂಡು ಉಜ್ಜಿರಬಹುದು ತಿನ್ನುವ ಮೊದಲು ಆ ರೀತಿಮಾಡುವದು ಸಹಜ, ಅದನ್ನು ಸಹ ಉಲ್ಲಂಘನೆ ಎಂದು ಪರಿಗಣಿಸಿದರು.

ಸಬ್ಬತ್ ದಿನದಂದು ಫರಿಸಾಯರು ಯಾಕೆ ಹೊಲದಲ್ಲಿದ್ದರು? ಅವರು ಯೇಸುವನ್ನು ಮತ್ತು ಶಿಷ್ಯರನ್ನು ಆರೋಪಿಸುವದಕ್ಕಾಗಿ ಯಾವುದಾದರೊಂದು ಮಾರ್ಗವನ್ನು ಕಂಡುಕೊಳ್ಳಲು ಅವರು ಅಲ್ಲಿಗೆ ಹೋಗಿದ್ದರು. ಅವರು ಯೇಸುವನ್ನು ಆತನ ಶಿಷ್ಯರು ಮಾಡುವ ಕಾರ್ಯದ ನಿಮಿತ್ತ ಆತನಿಗೆ ಪ್ರಶ್ನಿಸಿದರು ಯಾಕೆಂದರೆ ಶಿಷ್ಯರೆಲ್ಲಾ ನಡವಳಿಕೆಗೆ ಅವರ ಗುರುವೇ ಜವಾಬ್ದಾರನಾಗುತ್ತಿದ್ದನು. ಯೇಸು ಅವರ ನಡತೆಯನ್ನು ಕ್ಷಮಿಸಿರುವ ವಾಸ್ತವವು "ಮುಗ್ದರು" ಎಂದು ಆತನ ಮಾತಿನಿಂದ ದೃಢಪಡಿಸಿದ್ದಾನೆ (12:7).

**ವಚನಗಳು 3, 4.** ತನ್ನ ಶಿಷ್ಯರು ತೆನೆಗಳನ್ನು ಮುರಿದಕ್ಕಾಗಿ ಮತ್ತು ಅವುಗಳನ್ನು ತಿಂದಕ್ಕಾಗಿ ಯೇಸು ಅವರನ್ನು ಗದರಿಸಲಿಲ್ಲ. ಹಳೆ ಒಡಂಬಡಿಕೆಯ ಎರಡು ಉದಾಹರಣೆಗಳಿಂದ ಅವರನ್ನು ಸಮರ್ಥಿಸಿಕೊಂಡನು, ಎರಡನ್ನು **ನೀವು ... ಓದಲಿಲ್ಲವೋ?** ಎಂದು ಪರಿಚಯಿಸುತ್ತಾ ಸಮರ್ಥಿಸಿದನು. ಮಾತಿನಿಂದ ಫರಿಸಾಯರನ್ನು ಪ್ರಶ್ನಿಸುತ್ತಾ ಮತ್ತು ವಾಕ್ಯದೆಡೆಗೆ ಮೊರೆಹೋಗುವ ಈ ಯೋಜನೆ ಯೇಸು ಪರಿಣಾಮಕಾರಿಯಾಗಿ ಅನೇಕ ಸಾರಿ ಉಪಯೋಗಿಸಿದ್ದಾನೆ (12:3, 5; 19:4; 21:16, 42; 22:31), ಯೆಹೂದ್ಯರ ವಾದದಲ್ಲಿ ಇದು ಸಹಜವಾಗಿತ್ತು.[3] ಈ ಪ್ರಶ್ನೆ ಫರಿಸಾಯರಿಗೆ ಪೇಚಿನಲ್ಲಿ ಸಿಲುಕಿಸುವಂತೆ ಮಾಡಿತು ಎನ್ನುವದರಲ್ಲಿ ಯಾವುದೇ ಸಂಶಯವಿಲ್ಲ.

ಯೇಸುವಿನ ಮೊದಲ ಉದಾಹರಣೆ ಆತನನ್ನು ಬಹಳವಾಗಿ ಹೊಗಳುತ್ತಿದ್ದ **ದಾವೀದನಿಗೆ** ಸಂಬಂಧಿಸಿರುವದಾಗಿದೆ. ರಾಜನಾದ ಸೌಲನು ಕೋಪಗೊಂಡಾಗ ದಾವೀದನು ಅಲ್ಲಿಂದ ಓಡಿಹೋಗಿರುವದನ್ನು ಅವರಿಗೆ ಜ್ಞಾಪಿಸಿದನು (1 ಸಮುವೇಲ 21:1-6). **ದೇವರ ಮಂದಿರ ವಾಗಿರುವ** ನೋಬ್‌ಗೆ ದಾವಿದನು ಹೋದನು - ಅದುವೆ ಒಡಂಬಡಿಕೆಯ ಮಂಜುಷ ಪೆಟ್ಟಿಗೆ ಇಟ್ಟಿರುವ ಸ್ಥಳವಾಗಿತ್ತು. ಆತನು ಅಹೀಮೆಲೆಕನೆಂಬ ಯಾಜಕನನ್ನು ಸಂದಿಸಿದನು, ಇವನು ಅಹೀಬೂಬನ ಮಗನಾಗಿದ್ದನು, ಆ ಸಮಯದಲ್ಲಿ ಈತನು ನೋಬ್‌ನಲ್ಲಿ ಮಹಾಯಾಜಕನಾಗಿದ್ದನು (1 ಸಮುವೇಲ 22:11).

ಮೋಸದಿಂದಲೇ, ದಾವೀದನು ಆ ಯಾಜಕನಿಗೆ ನಾನು ಸೌಲ ರಾಜನ ಗುಪ್ತವಾದ ಸೇವೆಯ ನಿಮಿತ್ತ ಇಲ್ಲಿದ್ದೇನೆ ಎಂದು ನಂಬಿಕೆಯನ್ನುಂಟು ಮಾಡಿದನು. ತರುವಾಯ ಆತನಿಗೆ ದಾವೀದನು ನಾನು ಮತ್ತು **ತನ್ನ ಸಂಗಡವಿದ್ದವರಿಗೆ ಹಸಿವೆಯಾಗಿದೆ** ಅದಕ್ಕಾಗಿ ರೊಟ್ಟಿಯನ್ನು ಕೊಡು ಎಂದು ಕೇಳಿದನು. ಅಹೀಮೆಲೆಕನು ದಾವೀದನಿಗೆ ಮತ್ತು ಅವನ ಸಂಗಡಿಗರಿಗೆ "ಸಮ್ಮುಖ ರೊಟ್ಟಿಯಾದ" **ನೈವೇದ್ಯದ ರೊಟ್ಟಿಗಳನ್ನು** ಕೊಟ್ಟನು (ವಿಮೋಚನಕಾಂಡ 25:30; 35:13; 39:36), ಅದು ಗುಡಾರದಲ್ಲಿರುವ ಮೇಜಿನ ಮೇಲೆ ಇಟ್ಟಿರುತ್ತಿದ್ದರು. ಆ ರೊಟ್ಟಿ ಕೇವಲ **ಯಾಜಕರು** ಮಾತ್ರ ತಿನ್ನಬಹುದಾಗಿತ್ತು (ಯಾಜಕಕಾಂಡ 24:5-9). "ನೈವೇದ್ಯದ ರೊಟ್ಟಿ" ಇಡುವದಕ್ಕಾಗಿಯೇ ವಿಶೇಷವಾಗಿ ಮಾಡಿರುವ "ಸಮ್ಮುಖ ರೊಟ್ಟಿಯನ್ನು" ಮೇಜಿನ ಮೇಲಿಯೇ ಇಡುತ್ತಿದ್ದರು (ವಿಮೋಚನಕಾಂಡ 25:23-30), ಒಂದು ಸಾಲಿನಲ್ಲಿ ಆರು ರೊಟ್ಟಿಯಂತೆ ಎರಡು ಸಾಲುಗಳನ್ನಾಗಿ ಹನ್ನೆರಡು ರೊಟ್ಟಿಗಳನ್ನು ಇಡುತ್ತಿದ್ದರು. ಈ ರೊಟ್ಟಿಗಳು ಇಸ್ರಾಯೇಲಿನ ಹನ್ನೆರಡು ಕುಲಗಳನ್ನು ಮತ್ತು ಅವರ ಅನ್ಯೋನ್ಯತೆಯು ದೇವರೊಂದಿಗೆ ನಿರಂತರವಾಗಿ ಇರುವದೆಂದು ಇದು ಸೂಚಿಸುವಂಥದ್ದಾಗಿದೆ. ಇಸ್ರಾಯೇಲರು ದೇವರಿಗೆ ಸಮರ್ಪಿಸಲ್ಪಟ್ಟಿರುವ ಜನರಾಗಿದ್ದರು, ಮತ್ತು ಅದೇ ಅರ್ಥದಲ್ಲಿ ಈ ರೊಟ್ಟಿಗಳು ಯಾಜಕರಿಗೆ ಸಮರ್ಪಿಸಲ್ಪಟ್ಟಂಥವುಗಳಾಗಿವೆ (ಯಾಜಕಕಾಂಡ 24:5-9). ರೊಟ್ಟಿಗಳು ಪ್ರತಿ ಶುಕ್ರವಾರ ಮಾಡುತ್ತಿದ್ದರು. ಸಬ್ಬತ್ ದಿನದಂದು, ಈ ರೊಟ್ಟಿಗಳನ್ನು ಅಲ್ಲಿಟ್ಟು ಉಳಿದಿರುವ ರೊಟ್ಟಿಗಳನ್ನು ತೆಗೆದುಬಿಡುತ್ತಿದ್ದರು, ತೆಗೆದಿಯಿಟ್ಟಿರುವ ರೊಟ್ಟಿಗಳನ್ನು ಯಾಜಕರು ತಿನ್ನುತ್ತಿದ್ದರು (1 ಸಮುವೇಲ 21:6).

ಇಲ್ಲಿ ವಿವರಿಸಿರುವ ಅಂಶಗಳು ಎರಡು ರೀತಿಯಾಗಿ ಅರ್ಥಕೊಡುತ್ತದೆ. ಮೊದಲನೆಯದಾಗಿ, ದಾವೀದನು ನಿಜವಾಗಿಯೂ ನಿಯಮವನ್ನು ಮುರಿದನು, ಆಗಿರುವಾಗ ಕರ್ತನ ಶಿಷ್ಯರು ಕೇವಲ ಮನುಷ್ಯರು ಮಾಡಿರುವ ಧಾರ್ಮಿಕ ಸಂಪ್ರದಾಯಗಳನ್ನು ಉಲ್ಲಂಘನೆ ಮಾಡಿದರು. ದಾವೀದನು ಒಡಂಬಡಿಕೆಯ ನಿಯಮವನ್ನು ಮೀರಿದರು ಫರಿಸಾಯರು ಅದನ್ನು ಖಂಡಿಸಲಿಲ್ಲ, ಆದಾಗ್ಯೂ ಅವರ ಸಂಪ್ರದಾಯವನ್ನು ಮೀರಿದಕ್ಕೆ ಯೇಸುವಿನ ಶಿಷ್ಯರನ್ನು ಖಂಡಿಸುತ್ತಿದ್ದರು. ಎರಡನೆಯದಾಗಿ, ಯೇಸುವಿನ ಮನಸ್ಸಿನಲ್ಲಿ ಜನರು ಧರ್ಮಶಾಸ್ತ್ರಕ್ಕೆ ಆಧ್ಯತೆಯನ್ನು ಕೊಡಬೇಕೆನ್ನುವದಾಗಿತ್ತು: "ಸಬ್ಬತ್ ದಿನವು ಮನುಷ್ಯರಿಗೋಸ್ಕರ ಉಂಟಾಯಿತೇ ಹೊರತು ಮನುಷ್ಯರು ಸಬ್ಬತ್ ದಿನಕ್ಕೋಸ್ಕರ ಉಂಟಾಗಲಿಲ್ಲವೆಂದು

ಹೇಳಿದನು" (ಮಾರ್ಕ 2:27).

**ವಚನ 5.** ಯೇಸು ತೆಗೆದುಕೊಂಡಿರುವ ಎರಡನೆಯ ಉದಾಹರಣೆ ಅನೇಕ ಶತಮಾನಗಳಿಂದ **ಯಾಜಕರು ಸಬ್ಬತ್ ದಿನದಂದು** ಏನು ಮಾಡುತ್ತಿದ್ದರು ಎನ್ನುವ ವಿಷಯವಾಗಿದೆ. ಸಬ್ಬತ್ ದಿನದಂದು ಕೆಲಸ ಮಾಡುವದರ ನಿಷೇದವಿದ್ದರೂ ಯಾಜಕರು ಬೇರೆ ಬೇರೆ ಕೆಲಸಗಳನ್ನು ಮಾಡುತ್ತಿದ್ದರು, ಅದರಲ್ಲಿ ದೂಪ ಉರಿಸುವದು, ದೀಪಗಳನ್ನು ಸ್ವಚ್ಛಗೊಳಿಸಿ ಭೂಷಣಮಾಡುವದು, ಅರ್ಪಿಸಿರುವ ರೊಟ್ಟಿಗಳನ್ನು ಬದಲಾಯಿಸಿರುವದು, ಮತ್ತು ಎರಡೆರಡು ಯಜ್ಞಗಳನ್ನು ಅರ್ಪಿಸುವದು (ವಿಮೋಚನಕಾಂಡ 30:7, 8; ಯಾಜಕಕಾಂಡ 24:5-8; ಅರಣ್ಯಕಾಂಡ 28:9, 10). ಈ ಎಲ್ಲಾ ಕಾರ್ಯಗಳು ಸಬ್ಬತ್ತಿನ ದಿನದಂದು ಮಾಡುವದು ಫರಿಸಾಯರ ದೃಷ್ಟಿಯಲ್ಲಿ ಧರ್ಮಶಾಸ್ತ್ರದ ಪ್ರಕಾರ ಸಬ್ಬತ್ ದಿನಾಚಾರವು ಉಲ್ಲಂಘಿಸಿದಂತೆ ಆಗುವದಿಲ್ಲ, ನಿಯಮಕ್ಕನುಗುಣವಾಗಿಯೇ[4] ಯಾಕೆಂದರೆ ಈ ಎಲ್ಲಾ **ದೇವಾಲಯದ** ಕಾರ್ಯಗಳನ್ನು ಯಾಜಕರು ಮಾಡುತ್ತಿದ್ದರು. ಈ ಕಾರ್ಯದಲ್ಲಿ ಅವರು **ತಪ್ಪಿಗೆ ಗುರಿಯಾಗುವದಿಲ್ಲ** ಮತ್ತು ಅವರು ಸಬ್ಬತ್ ದಿನವನ್ನು ಉಲ್ಲಂಘನೆ ಮಾಡಲಿಲ್ಲ.

ಸಬ್ಬತ್‌ನ್ನು ಉಲ್ಲಂಘಿಸು ಎನ್ನುವ ವಾಕ್ಯಭಾಗದಲ್ಲಿ, "ಉಲ್ಲಂಘನೆ" (*bebēloō*) ಎನ್ನುವ ಶಬ್ದವನ್ನು (NIV) ಸತ್ಯವೇದದಲ್ಲಿ "ಅಶುದ್ಧಮಾಡು" ಎಂದು ಅನುವಾದಿಸಲಾಗಿದೆ. ಯಾಜಕರ ಕಾರ್ಯಗಳು ಸಾಮಾನ್ಯ ಸಬ್ಬತ್ ದಿನದ ನಿಯಮಗಳನ್ನು ಮೀರದಂತೆ ಮಾಡುತ್ತಿದ್ದರು ಎಂದು ಯೇಸು ಹೇಳಿದನು.

**ವಚನ 6.** ತರುವಾಯ ಯೇಸು, **ಆದರೆ ಇಲ್ಲಿ ದೇವಾಲಯಕ್ಕಿಂತ ಹೆಚ್ಚಿನವನು ಇದ್ದಾನೆಂದು ನಿಮಗೆ ಹೇಳುತ್ತೇನೆ ಅಂದನು.** ಯೇಸು ಈ ವಾದವನ್ನು ಈ ರೀತಿಯಾಗಿ ಹೇಳಿರಬಹುದೆಂದು Douglas R. A. Hare ರವರು ಆಲೋಚಿಸಿದ್ದಾರೆ: "ಒಂದು ವೇಳೆ ದೇವಾಲಯವು ಸಬ್ಬತ್ ದಿನವು ಎಷ್ಟೋ ಹೆಚ್ಚಾದ ಪ್ರಧಾನ್ಯತೆ ಹೊಂದಿರುತ್ತದೆ."[5] ಆತನು ಹೇಳಿರುವ ವಿವರಣೆಯು ಅಂದರೆ "ಯಾವುದಾದರೊಂದರಲ್ಲಿ ಹೆಚ್ಚಿನವನು" ಎಂದು ಯೇಸು ಹೇಳಿರುವ ಅರ್ಥವು ಅದು ಎಲ್ಲಾ ಪ್ರಶ್ನೆಗಳಿಗೆ ಸ್ಪಷ್ಟವಾಗಿ ಉತ್ತರಿಸುವದಿಲ್ಲ (*meizon*; ಅಕರ್ಮಿಕ ಕ್ರಿಯಾಪದವಾಗಿದೆ).

ಯೇಸುವಿಗೆ ಸಂಬಂಧಿಸಿರುವ ಈ "ಯಾವುದಾದರೊಂದರಲ್ಲಿ ಹೆಚ್ಚಿನವನು" ಎಂದು 12:41, 42ರಲ್ಲಿ ಬರೆದಿರುವ ವಾಸ್ತವದಿಂದ - ಇಲ್ಲಿ ಭಿನ್ನವಾದ ಅಕರ್ಮಿಕ ಕ್ರಿಯಾಪದವನ್ನು ಉಪಯೋಗಿಸಲಾಗಿದೆ - ಆಗ ಹಳೆ ಒಡಂಬಡಿಕೆ ಪುರುಷರು (ನೋಡಿರಿ ಯೋಹಾನ 4:12; 5:46; 8:53) ಒಳಗೊಂಡಿರುವ ಒಂದು ತಾರತಮ್ಯವು ಹೊರಗೆ ತೆಗೆಯಲಾಗಿದೆ. ಅದು ಮಾತ್ರವಲ್ಲದೆ ಯೇಸುವಿನ ವ್ಯಕ್ತಿತ್ವ ದೇವಾಲಯಕ್ಕೆ ಸರಿಯಾಗಿ ಹೊಂದಿಕೆಯಾಗುವ ಭಿನ್ನತೆ ಇದೆ, ಯಾಕೆಂದರೆ ಆತನಲ್ಲಿ ದೇವರು ಸಂಪೂರ್ಣವಾಗಿ ನಿವಾಸಿಸುತ್ತಾನೆ (ಕೊಲಸ್ಸೆ 2:9; ನೋಡಿರಿ ಯೋಹಾನ 2:18-22).

"ಯಾವುದಾದರೊಂದರಲ್ಲಿ ಹೆಚ್ಚಿನವನು" ಎನ್ನುವ ವಿಷಯದಲ್ಲಿ ಇತರೆ ಸಾಧ್ಯಗಳು ಗುರುತಿಸಲಾಗಿದೆ. ಅದರಲ್ಲಿ ಯೇಸುವಿನ ಅಧಿಕಾರವು ಒಳಗೊಂಡಿದೆ, ಆತನ ಸಂದೇಶ, ಮತ್ತು ದೇವರ ರಾಜ್ಯ ಗೋಚರವಾಗುವದು ಒಳಗೊಂಡಿದೆ. J. W. McGarvey ರವರು ಶಿಷ್ಯರ ಸೇವೆಯು "ಯಾವುದಾದರೊಂದರಲ್ಲಿ ಹೆಚ್ಚಿನವರು" ಎಂಬುದಾಗಿ ಅವರು ಆಲೋಚಿಸಿ ಹೀಗೆ ಹೇಳಿದ್ದಾರೆ:

> ಇದು ಯೇಸುವಿಗೆ ಅವರು ಸಮರ್ಪಿಸಿರುವ ಸೇವೆಯಾಗಿದೆ - ಸೇವೆಯು ಕೆಲವು ಸಾರಿ ಆಹಾರವನ್ನು ಒದಗಿಸುವದಕ್ಕೆ ಅಡ್ಡಿಪಡಿಸುತ್ತದೆ. ಇದು ದೇವಾಲಯಕ್ಕಿಂತಲೂ ಶ್ರೇಷ್ಠವಾದ ಸೇವೆ ಎಂದು ಮಾಡುವ ಋಣಬದ್ಧವಾದ ಕಾರ್ಯವಾಗಿದೆ; ಅದು

ಸಹ ಯಾಜಕರ ಮೇಲೆ ಇರುವ ದೇವಾಲಯದ ಸೇವೆಗಿಂತಲೂ ದೊಡ್ಡದಾದ ಸೇವೆಯಾಗಿದೆ. ಹಾಗಾದರೆ, ಒಂದು ವೇಳೆ, ಯಾಜಕರು ಶಿಷ್ಯರಿಗಿಂತಲೂ ಹೆಚ್ಚಾಗಿ ನ್ಯಾಯಸಮ್ಮತವಾಗಿದ್ದರೆ, ಶಿಷ್ಯರು ಸಹ [ಅವರು ಮಾಡುವ ಕಾರ್ಯಗಳಲ್ಲಿ ನ್ಯಾಯ ಸಮ್ಮತವಾಗಿದ್ದಾರೆ].[6]

**ವಚನ 7.** ಮತ್ತೊಂದಾವರ್ತಿ, ಯೇಸು ಕರುಣೆಯ ಪ್ರಾಮುಖ್ಯತೆ ವಿವರಿಸಿ ತೋರಿಸಲು ಹೋಶೆಯಾ ಗ್ರಂಥದಲ್ಲಿರುವ ವಾಕ್ಯವನ್ನು ಒತ್ತಿ ಹೇಳಿದ್ದಾನೆ: **ನನಗೆ ಯಜ್ಞವು ಬೇಡ, ಮತ್ತು ನನಗೆ ಕರುಣೆಯೇ ಬೇಕು** (ಹೋಶೆಯ 6:6; 9:13ರ ಮೇಲಿನ ವ್ಯಾಖ್ಯಾನ). ಧರ್ಮಶಾಸ್ತ್ರದ ಅದಿನದಲ್ಲಿಯೇ ಯಾಜಕರು ಯಜ್ಞವನ್ನು ಅರ್ಪಿಸುವ ಕಾರ್ಯ ಮಾಡುತ್ತಿದ್ದರು, ಆದರೆ ಅವರು ಮನುಷ್ಯರ ಕರುಣೆಗಿಂತಲೂ ಅವರ ಕರ್ತವ್ಯವೇ ಮುಖ್ಯವೆಂದು ತೋರಿ ಸುವದರಲ್ಲಿ ಅವರು ಅತ್ಯಾಸಕ್ತಿ ಹೊಂದಿದ್ದರು. ಫರಿಸಾಯರು ಹೋಶೆಯನ ಮಾತುಗಳನ್ನು ಅರ್ಥಮಾಡಿಕೊಂಡಿದ್ದರೆ, **ಮುಗ್ದರಾಗಿರುವ** ಯೇಸುವಿನ ಶಿಷ್ಯರಿಗೆ ಅವರು **ಖಂಡನೆ ಮಾಡುತ್ತಿರಲಿಲ್ಲ.** ಅದರ ಬದಲಾಗಿ, ಅವರು ಶಿಷ್ಯರ ಮೇಲೆ ಕರುಣೆ ತೋರಿಸುತ್ತಿದ್ದರು.

**ವಚನ 8.** ಮನುಷ್ಯಕುಮಾರನು **ಸಬ್ಬತ್ ದಿನಕ್ಕೆ ಒಡೆಯನಾಗಿದ್ದಾನೆ** ತನ್ನ ಶಿಷ್ಯರ ಕಾರ್ಯಗಳ ಕುರಿತಾಗಿ ಯೇಸುವಿನ ಅಂತಿಮ ಸಮರ್ಥನೆ ಇದಾಗಿದೆ. ಆತನು ತನ್ನ ದೈವೀಕ ಅಧಿಕಾರವನ್ನು ಈ ರೀತಿಯಾಗಿ ಯೇಸು ಹೇಳುವದರಿಂದ ಪ್ರತಿಪಾದಿಸುತ್ತಿದ್ದಾನೆ. ಆತನ ದೈವೀಕತೆಯು ಸಬ್ಬತ್ ದಿನದ ನಿಯಮದ ಬಗ್ಗೆ ವ್ಯಾಖ್ಯಾನ ಮಾಡಲು ಅಧಿಕಾರಕೊಟ್ಟಿತು (ಫರಿಸಾಯರಿಗೆ ಭಿನ್ನವಾಗಿತ್ತು) ಮತ್ತು ಆತನು ಬಯಸಿದರೆ ಅದನ್ನು ಪಕ್ಕಕಿಡಲು ಅಧಿಕಾರವುಂಟು. ಯೇಸುವಿನ ಹಿಂದಿನ ಕಾರ್ಯಗಳು ಈಗಾಗಲೇ ಸಬ್ಬತ್ ಒಡೆಯನೆಂದು ಪ್ರದರ್ಶಿಸಿವೆ ಮತ್ತು ಆತನು ನ್ಯಾಯ ತೀಲಿಸುವಂಥವನು ಮತ್ತು ಸಬ್ಬತ್ ಆಚರಣೆಯನ್ನು ಸರಿಯಾಗಿ ಕ್ರಮಪಡಿಸಲು ಆತನು ಕರ್ತನಾಗಿದ್ದಾನೆ ಎಂಬುದು ತೋರಿಸಿಕೊಟ್ಟಿವೆ.[7]

ಯೇಸು ಸಬ್ಬತ್ ದಿನದಂದು ಕ್ರಮವಾಗಿ ದೇವಾಲಯಕ್ಕೆ ಹೋಗುವದರಿಂದ ಅದನ್ನು ಗೌರವಿಸಿದ್ದಾನೆ (ಲೂಕ 4:16-27). ಆತನು ತನ್ನ ಕರುಣೆಯನ್ನು ಇತರರ ಮೇಲೆ ಸಬ್ಬತ್ ದಿನದಂದು ತೋರಿಸಿದರಿಂದ ಆತನಿಗೆ ಆರೋಪಿಸಿದರು (12:9-14; ಲೂಕ 13:10-17; 14:1-6; ಯೋಹಾನ 5:1-9; 7:23; 9:1-7, 14). ಕರ್ತನ ಶಿಷ್ಯರು ಮನುಷ್ಯರು ಮಾಡಿದ ಸಂಪ್ರದಾಯಗಳಿಗಿಂತಲೂ ಮೇಲಾಗಿ ಆತನಿಗೆ ಭಕ್ತಿಯನ್ನು ತೋರಿಸಿದರು ಮತ್ತು ಸೇವೆಯನ್ನು ಮಾಡಿದರು. ಅದಕ್ಕೆ ಭಿನ್ನವಾಗಿ, ಫರಿಸಾಯರು ಆ ರೀತಿಯಾಗಿ ಶಿಷ್ಯರು ಯೇಸುವಿಗೆ ಮಾಡಿದ್ದಕ್ಕೆ ಶಿಷ್ಯರು ಕರ್ತನ ಸಬ್ಬತ್‌ನ್ನು ಉಲ್ಲಂಘಿಸಿದರೆಂದು ಅವರನ್ನು ಖಂಡಿಸಿದರು.

## ಸ್ವಸ್ಥಮಾಡುವದರಿಂದ ಅಪವಿತ್ರಗೊಳಿಸುವಿಕೆ? (12:9-14)

**9ಆತನು ಅಲ್ಲಿಂದ ಹೊರಟು ಸಭಾಮಂದಿರಕ್ಕೆ ಹೋದಾಗ ಅಲ್ಲಿ ಕೈ ಬತ್ತಿದವನೊಬ್ಬನಿದ್ದನು. 10ಆಗ ಅವರು ಆತನ ಮೇಲೆ ತಪ್ಪು ಹೊರಿಸಬೇಕೆಂದು ಆತನನ್ನು - ಸಬ್ಬತ್‌ದಿನದಲ್ಲಿ ಸ್ವಸ್ಥಮಾಡುವದು ಸರಿಯೋ ಎಂದು ಕೇಳಿದರು. 11ಅದಕ್ಕಾತನು - ನಿಮ್ಮಲ್ಲಿ ಯಾರಿಗಾದರೂ ಒಂದೇ ಒಂದು ಕುರಿ ಇದ್ದು ಅದು ಸಬ್ಬತ್ ದಿನದಲ್ಲಿ ಕುಣಿಯೊಳಗೆ ಬಿದ್ದರೆ ಅವನು ಅದನ್ನು ಹಿಡಿದು ಮೇಲಕ್ಕೆ ತೆಗೆಯದೆ ಇರುವನೇ? 12ಕುರಿಗಿಂತ ಮನುಷ್ಯನು ಎಷ್ಟೋ ಹೆಚ್ಚು. ಆದಕಾರಣ ಸಬ್ಬತ್ ದಿನದಲ್ಲಿ ಒಳ್ಳೇ ಕೆಲಸ ಮಾಡುವದು ತಕ್ಕದ್ದೇ ಸರಿ ಎಂದು ಉತ್ತರ ಕೊಟ್ಟು ಆ ಮನುಷ್ಯನಿಗೆ - 13ನಿನ್ನ ಕೈ ಚಾಚು! ಎಂದು ಹೇಳಿದನು; ಅವನು ಚಾಚಿದನು. ಅದು ಸಂಪೂರ್ಣವಾಗಿ ವಾಸಿಯಾಗಿ ಮತ್ತೊಂದರ ಹಾಗಾಯಿತು. 14ಆದರೆ ಫರಿಸಾಯರು ಹೊರಕ್ಕೆ ಹೋಗಿ ಇವನನ್ನು ಯಾವ ಉಪಾಯದಿಂದ ಕೊಲ್ಲೋಣ ಎಂದು ಆತನಿಗೆ ವಿರೋಧವಾಗಿ ಆಲೋಚನೆಮಾಡಿಕೊಂಡರು.**

**ವಚನ 9. ಅಲ್ಲಿಂದ ಹೊರಟು** ಹೋದರು (ನೋಡಿರಿ 11:1; 13:53; 15:29; 19:1) ಎಂಬ ಪದವು ತೆನೆಗಳಿರುವ ಹೊಲದ ದೃಶ್ಯವನ್ನು ಅವರ **ಸಭಾಮಂದಿರದಲ್ಲಿ** ಅಂಥಹದ್ದೆ ಇನ್ನೊಂದು ಸನ್ನಿವೇಶದೊಂದಿಗೆ ಜೋಡಿಸುತ್ತಿದ್ದಾರೆ. ಜನರಿಗೆ ಸಬ್ಬತ್ ದಿನವು ಮೂಲತಃ ಅದು ವಿಶ್ರಾಂತಿಯ ದಿನವಾಗಿದೆ, ಯೆಹೂದ್ಯರು ಸಭಾ ಮಂದಿರದಲ್ಲಿ ಪ್ರಾರ್ಥನೆ ಮಾಡುವದಕ್ಕಾಗಿ ಮತ್ತು ಧರ್ಮಶಾಸ್ತ್ರದ ನಿಯಮಗಳನ್ನು ಅಧ್ಯಯನ ಮಾಡಲು ಬರಲು ಪ್ರಾರಂಭಿಸಿದಾಗ ಆ ಸಬ್ಬತ್ ದಿನವು ಪರಿಶುದ್ಧ ದಿನವಾಯಿತು. ಇಲ್ಲಿ ಹೇಳಿರುವ ಶಬ್ದ "ಅವರು" ಎನ್ನುವದನ್ನು ಅಧುನಿಕರಿಸಿ "ಯೆಹೂದ್ಯರ ಸಭಾಮಂದಿರ" ಎಂಬುದಾಗಿ ಹೇಳಲಾಗಿದೆ, ಇದು ಯೇಸು ಮತ್ತು ಯೆಹೂದ್ಯರ ಸ್ಥಾಪನೆ ಅಥವಾ ಮತ್ತಾಯನ ಕಾಲದ ಸಭೆ ಮತ್ತು ಯೆಹೂದ್ಯ ಮತ ಇವುಗಳ ನಡುವೆ ಇರುವ ಪ್ರತ್ಯಕಿಸುವಿಕೆಯನ್ನು ಪ್ರತಿಬಿಂಬಿಸುತ್ತವೆ. ಸ್ಥಳೀಯ ಜನಸಮೂಹದಿಂದ ಯೇಸು ಮತ್ತು ಆತನ ಶಿಷ್ಯರೆಂದು ಸರಳವಾಗಿ ಬೇರ್ಪಡಿಸುವಂಥ ಇನ್ನೊಂದು ಸಾಧ್ಯತೆಯಿದೆ (ನೋಡಿರಿ 4:23; 9:35; 10:17; 13:54).

**ವಚನ 10.** ಯೇಸು ಸಭಾಮಂದಿರದಲ್ಲಿ ಹೋದಾಗ, ಅದು ಕಪೆರ್ನೌಮ ಆಗಿರಬಹುದು. ಸಬ್ಬತ್ ಕುರಿತು ಈಗಾಗಲೇ ಬೋಧಿಸಿರುವ ಸತ್ಯವನ್ನು ಅಳವಡಿಸಿಕೊಳ್ಳಲು ಒಳ್ಳೆಯ ಅವಕಾಶ ಆತನಿಗೆ ದೊರಕಿತು. **ಅಲ್ಲಿ ಕೈ ಬತ್ತಿದವನೊಬ್ಬನಿದ್ದನು.** "ಕೈ ಬತ್ತಿದವನು" ಎಂಬ ಶಬ್ದವನ್ನು "ಪಾರ್ಶ್ವವಾಯು" ಎಂದು ಸಹ ಅನುವಾದಿಸಬಹುದಾಗಿದೆ. ಯೇಸುವಿನ ವಿರೋಧಿ ಗಳು ಆತನಿಗೆ, **ಸಬ್ಬತ್ ದಿನದಲ್ಲಿ ಸರಿಮಾಡುವದು ಸರಿಯೋ?** ಎಂದು ಕೇಳಿದರು. ಅವರು ಈ ಪ್ರಶ್ನೆಯನ್ನು ಕೇಳಿದಾಗ, ಅವರು ತಿಳಿದುಕೊಳ್ಳುವದಕೊಸ್ಕರ ಕೇಳಲಿಲ್ಲ. ಅದರ ಬದಲಾಗಿ, ಅವರು **ಆತನನ್ನು ಆರೋಪಿಯನ್ನಾಗಿ** ಮಾಡುವದಕ್ಕಾಗಿ ಕೇಳಿದರು. ವಚನ 14ರಲ್ಲಿ ನೋಡು ವಾಗ ಯೇಸುವಿನ ವಿರೋಧಿಗಳು ಅವರು ಫರಿಸಾಯರು ಆಗಿದ್ದರು.

ಮಾರ್ಕ ಸುವಾರ್ತೆ ಪ್ರಕಾರ, ಕೈ ಬಿದ್ದು ಹೋಗಿರುವವನಿಗೆ ಯೇಸು ಆಜ್ಞಾಪಿಸಿ "ಎದ್ದು ಮುಂದೆ ಬಾ!" ಎಂದು ಆಜ್ಞಾಪಿಸಿದನು (ಮಾರ್ಕ 3:3). ಬಹುಶಃ ಅಲ್ಲಿದ್ದವರು ಅದನ್ನು ನೋಡುವಂತೆ ಆತನು ಮನುಷ್ಯನ ಕೈಯನ್ನು ನೆಟ್ಟಗೆ ಮಾಡಿರಬಹುದು. ತರುವಾಯ ಆತನು ತನ್ನ ವಿರೋಧಿಗಳಿಗೆ, "ಸಬ್ಬತ್ ದಿನದಲ್ಲಿ ಯಾವದನ್ನು ಮಾಡುವದು ನ್ಯಾಯ? ಮೇಲನ್ನು ಮಾಡುವದೋ? ಕೇಡನ್ನು ಮಾಡುವದೋ?" ಎಂದು ಕೇಳಿದನು (ಮಾರ್ಕ 3:4). ಏನೇ ಆದರೂ ಯಾರೊಬ್ಬರು ಉತ್ತರ ಕೊಡಲಿಲ್ಲ.

**ವಚನ 11.** ಅವರ ಪ್ರಶ್ನೆಗೆ ಯೇಸು ಪ್ರತಿಕ್ರಿಯಿಸುತ್ತಾ ಒಂದು ದೃಷ್ಟಾಂತವನ್ನು ಹೇಳಿದನು. ಒಬ್ಬ ವ್ಯಕ್ತಿಗೆ **ಒಂದು ಕುರಿ ಇದ್ದು ಅದು ಸಬ್ಬತ್ ದಿನದಲ್ಲಿ ಕುಣಿಯೊಳಗೆ** ಬೀಳುತ್ತದೆ. ಅಂಥಹ ಸಂದರ್ಭದಲ್ಲಿ ಅದನ್ನು ಗುಡಿಯಿಂದ ಮೇಲಕ್ಕೆ ಎತ್ತದೆ ಇರುವನೇ? ಅದೇ ರೀತಿಯಾಗಿ, ಯೇಸು ಅವರಿಗೆ, "ಯಾವನೋ ಒಬ್ಬನ ಮಗನಾಗಲಿ ಎತ್ತಾಗಲಿ ಬಾವಿಯಲ್ಲಿ ಬಿದ್ದರೆ ಅವನು ತಡಮಾಡದೆ ಸಬ್ಬತ್ ದಿನದಲ್ಲಾದರೂ ಮೇಲಕ್ಕೆ ತೆಗೆಯುದಿಲ್ಲವೋ?" ಎಂದು ಕೇಳಿದನು (ಲೂಕ 14:5). ಕೆಲವು ಆಚರಣೆಯ ಪದ್ಧತಿಯಲ್ಲಿ, ಫರಿಸಾಯರು ಸಬ್ಬತ್ ದಿನದಂದು ಪ್ರಾಣಿಗಳನ್ನು ರಕ್ಷಿಸಲು ಅವಕಾಶ ಮಾಡಿಕೊಡುವನು.[8]

**ವಚನ 12.** ಯೇಸು ತನ್ನ ವಿಷಯವನ್ನು ಸ್ಪಷ್ಟಪಡಿಸಿ: **ಕುರಿಗಿಂತ ಮನುಷ್ಯನು ಎಷ್ಟೋ ಹೆಚ್ಚಾಗಿದ್ದಾನೆ!** ಎಂದು ಹೇಳಿದನು (ನೋಡಿರಿ 6:26; 10:31; ಲೂಕ 15:3-7). ದೇವರು ತನ್ನ ಸ್ವರೂಪದಲ್ಲಿ ಮನುಷ್ಯನನ್ನು ಉಂಟುಮಾಡಿದನು ಮತ್ತು ಸೃಷ್ಟಿ ಎಲ್ಲಾವುಗಳ ಮೇಲೆ ದೊರೆತನ ಮಾಡಿರಿ ಎಂದು ಹೇಳಿದನು (ಆದಿಕಾಂಡ 1:27, 28). ಮನುಷ್ಯನು ಶ್ರೇಷ್ಟನು, ದೇವರ ಸೃಷ್ಟಿಗಳಲ್ಲಿ ಅವನೇ ಕಿರೀಟದಂತೆ ಇದ್ದಾನೆ (ಕೀರ್ತನೆ 8:3-8).

ಸಬ್ಬತ್ ದಿನದ ಕುರಿತು ಯೆಹೂದ್ಯರ ನಿಯಮಗಳು ಬಹಳ ಕಟ್ಟುನಿಟ್ಟಾಗಿ ಇದ್ದವು, ಆ ದಿನದಂದು ಕೆಲವು ಕರುಣೆಯ ವಿಷಯಕ್ಕೆ ಸಂಬಂಧಿಸಿದ ವಿಷಯಗಳಿಗೆ ಅವಕಾಶ ಮಾಡಿಕೊಡಲಾಗಿತ್ತು. ಒಬ್ಬನ ಜೀವಿತ ಅಪಾಯದಲ್ಲಿರುವಾಗ, ಅವರನ್ನು ಉಳಿಸುವದಕ್ಕೆ

ವೈದ್ಯಕೀಯವಾಗಿ ಗಮನ ಕೊಡಲಾಗುವದು.[9] ಒಬ್ಬ ಹೆಂಗಸು ಮಗುವಿನ ಜನ್ಮ ಕೊಡುವ ಸಂದರ್ಭದಲ್ಲಿ ಸೂಲಗಿತ್ತಿಯನ್ನು ಕರೆದು ಹೆರಿಗೆಯಾಗಲು ಸಹಾಯಮಾಡುವಳು.[10] ಏನೇ ಆದರೂ, ಒಬ್ಬ ವ್ಯಕ್ತಿಯ ಪರಿಸ್ಥಿತಿಯು ಅಪಾಯದಲ್ಲಿರದಿದ್ದರೆ, ಅಸಾಧಾರಣವಾದ ಉಪಾಯಗಳನ್ನು ತೆಗೆದುಕೊಳ್ಳುವದಿಲ್ಲ.[11] ಎಂಟನೆಯ ದಿನದಲ್ಲಿ ಸುನ್ನತಿ ಮಾಡಿಸುವದು ನಿಯಮದಿಂದ ವಿನಾಯಿಸಲಾಗಿದೆ; ಈ ಪವಿತ್ರವಾದ ಆಚರಣೆ ಸಬ್ಬತ್ ದಿನದ ನಿರ್ಭಂದಗಳನ್ನು ರದ್ದುಪಡಿಸಿದೆ (ಯೋಹಾನ 7:22, 23).[12]

ಯೇಸುವಿನ ಮುಂದೆ ಈ ವಿಷಯವಿತ್ತು, ಕೈ ಬತ್ತಿಹೋದವನು ಜೀವನ ಅಪಾಯದಲ್ಲಿ ಇರಲಿಲ್ಲ. ಯೇಸು ವಾರದ ಆರು ದಿನಗಳಲ್ಲಿ ಸ್ವಸ್ಥಮಾಡಬಹುದು ಆದರೆ ಸಬ್ಬತ್ ದಿನದಲ್ಲಿ ಮಾತ್ರ ಮಾಡುವದು ಬೇಡ ಎನ್ನುವದು ಯೆಹೂದ್ಯ ನಾಯಕರ ಆಲೋಚನೆಯಾಗಿತ್ತು (ಲೂಕ 13:14). **ಸಬ್ಬತ್ ದಿನದಲ್ಲಿ ಒಳ್ಳೇ ಕೆಲಸ ಮಾಡುವ** ನಿಯಮವು ಅವಕಾಶ ಕೊಡುತ್ತದೆಂದು ಯೇಸು ಬೋಧಿಸಿದನು. ನಿಶ್ಚಯವಾಗಿ, ನಿಯಮವು ಕೆಟ್ಟ ಕಾರ್ಯಮಾಡಲು ನಿಷೇಧಿಸುತ್ತದೆ. ಯೇಸುವಿನ ಅಂಶದ ಅವಲೋಕನದಿಂದ, ಈ ಮನುಷ್ಯನನ್ನು ಕರುಣಾಜನಕ ಸ್ಥಿತಿಯಲ್ಲಿಯೇ ಬಿಟ್ಟು ಬಿಡುವದು ಅವರ ಆಲೋಚನೆಯಾಗಿತ್ತು ಏನಾದರು ಒಳ್ಳೆಯದನ್ನು ಮಾಡಿದರೆ ಅದು ಅವರಿಗೆ ಕೆಟ್ಟದ್ದಾಗಿ ಕಾಣಿಸುತ್ತಿತ್ತು. ಅದಕ್ಕೆ ಭಿನ್ನವಾಗಿ ಯೇಸು ಒಳ್ಳೆಯದನ್ನೆ ಮಾಡಿದನು, ಸಬ್ಬತ್ ದಿನದಂದು ಫರಿಸಾಯರು ದುಷ್ಟತನದಿಂದ ಕೊಲ್ಲುವದಕ್ಕಾಗಿ ಹೊಂಚು ಹಾಕುತ್ತಿದ್ದರು (12:14).

**ವಚನ 13.** ಯೇಸು ಕೇಳಿದ್ದಕ್ಕೆ ಫರಿಸಾಯರು ಆತನಿಗೆ ಪ್ರತಿಕ್ರಿಯೆ ಮಾಡದೇ ಇರುವಾಗ, "ಅವರ ಕಠಿಣ ಹೃದಯವನ್ನು ನೋಡಿ ಯೇಸು ದುಃಖಪಟ್ಟನು" ಎಂದು ಮಾರ್ಕನು ಸೇರಿಸಿದ್ದಾನೆ (ಮಾರ್ಕ 3:5). ವೈರತ್ವದ ಫಲವು ಬರುತ್ತದೆಂದು ಆತನಿಗೆ ಮೊದಲೆ ತಿಳಿದಿತ್ತು, ಯೇಸು ಕೈ ಬತ್ತಿದವನಿಗೆ ಅಪ್ಪಣೆ ಕೊಟ್ಟು. **ನಿನ್ನ ಕೈ ಚಾಚು!** ಎಂದು ಹೇಳಿದನು. ತಕ್ಷಣವೇ ಅವನು ಚಾಚಿದನು ಆತನ **ಕೈ ಗುಣವಾಗಿ, ಇನ್ನೊಂದು ಕೈಯಂತೆ ಆಯಿತು.** ಯೇಸು ಅವನಿಗೆ ಕೇವಲ ಮಾತಿನಿಂದಲೇ ಗುಣಪಡಿಸಿದನು. ಸ್ಪಷ್ಟವಾಗಿ, ಆತನು ಆ ವ್ಯಕ್ತಿಯ ಮೇಲೆ ತನ್ನ ಕೈಯನ್ನು ಸಹ ಇಡಲಿಲ್ಲ.

**ವಚನ 14. ಫರಿಸಾಯರು** ತಕ್ಷಣವೇ ಸಭಾಮಂದಿರವನ್ನು ಬಿಟ್ಟು ಹೊರಗೆ ಹೋದರು ಮತ್ತು ಅವರು ಹೆರೋದ್ಯರನ್ನು ಸೇರಿ ಒಳಸಂಚು ಮಾಡಿ (ಮಾರ್ಕ 3:6) **ಆತನನ್ನು ಹೇಗೆ ಕೊಲ್ಲೋಣವೆಂದು ಉಪಾಯ ಮಾಡಿದರು.** ಈ ಎರಡು ಗುಂಪುಗಳು ಸಾಮಾನ್ಯವಾಗಿ ವೈರಿಗಳಾಗಿದ್ದರು. ಹೆರೋದ್ಯರು ರೋಮನ ಉದ್ಯೋಗಸ್ತರನ್ನು ಅದರಂತೆ ಹೆರೋದ್ಯನ ನಿಯಮಗಳನ್ನು ಪ್ರೋತ್ಸಾಹ ಮಾಡುತ್ತಿದ್ದರು. ಫರಿಸಾಯರು ಈ ಎರಡು ಗುಂಪುಗಳಿಗೆ ಬಲವಾಗಿ ವಿರೋಧಿಸುತ್ತಿದ್ದರು. ಸಾಮಾನ್ಯವಾಗಿ, ಫರಿಸಾಯರು ಮತ್ತು ಹೆರೋದ್ಯರು ಒಬ್ಬರಿಗೊಬ್ಬರು ಅವರು ಏನನ್ನು ಮಾಡುತ್ತಿರಲಿಲ್ಲ, ಆದರೆ ಈ ಎರಡು ಗುಂಪುಗಳು - ವಿರೋಧದ ಗುಣದಿಂದ ಪ್ರೋತ್ಸಾಹಗೊಂಡವರಾಗಿದ್ದು - ಯೇಸುವನ್ನು ನಾಶಮಾಡಲು ಒಳಸಂಚಿನಲ್ಲಿ ಒಂದು ಗೂಡಿದರು.

ಧರ್ಮಶಾಸ್ತ್ರದಲ್ಲಿ, ಸಬ್ಬತ್ ದಿನವನ್ನು ಉಲ್ಲಂಘನೆ ಮಾಡಿದವರಿಗೆ ಮರಣದಂಡನೆ ಆಗಬೇಕೆಂದು ನಿಯಮವಿದೆ (ವಿಮೋಚನಕಾಂಡ 31:14; 35:2; ಅರಣ್ಯಕಾಂಡ 15:35). ಯೇಸು ಧರ್ಮಶಾಸ್ತ್ರವನ್ನು ಉಲ್ಲಂಘನೆ ಮಾಡುವದೇ ಫರಿಸಾಯರಿಗೆ ಬೇಕಾಗಿತ್ತು ಆದರಿಂದ ಆತನಿಗೆ ಮರಣದಂಡನೆ ಕೊಡಬಹುದಾಗಿತ್ತು. ಏನೇ ಆದರೂ, ಯೇಸು ಸಬ್ಬತ್‌ನ್ನು ಉಲ್ಲಂಘನೆ ಮಾಡಲಿಲ್ಲ, ಕೇವಲ ಫರಿಸಾಯರ ಸಂಪ್ರದಾಯ ಈ ವಿಷಯವನ್ನು ಪರಿಗಣಿಸುತ್ತಾ ಇತ್ತು, ಅದು ಮಾತ್ರವಲ್ಲದೆ, ಯೆಹೂದ್ಯರು ರೋಮನ ಅದಿನದಲ್ಲಿ ಇರುವವರೆಗೆ, ಅವರು ಕಾರ್ಯನಿರ್ವಹಿಸುವ ಹಕ್ಕುಗಳು ಮಿತಿಯಲ್ಲಿದ್ದವು (ನೋಡಿರಿ ಯೋಹಾನನ 18:31). ಈ ವಿರೋಧಿಗಳ ಸಂಯೋಗವು ಫರಿಸಾಯರು ಹೆರೋದ್ಯರೊಂದಿಗೆ ಒಳಸಂಚು ಯಾಕೆ

ಮಾಡಿದರು ಎಂದು ವಿವರಿಸುತ್ತದೆ; ಅವರ ಕಾರ್ಯಗಳು ಹೆರೋದ ಅಂತಿಪಸನ ಕಡೆಗೆ ಒಂದು ಹೆಜ್ಜೆ ಮುಂದೆ ಇಡುತ್ತವೆ, ಈತನು ಗಲಿಲಾಯ ಪ್ರಾಂತದ ಮೇಲೆ ರೋಮಾ ಸರ್ಕಾರದ ಅಧಿಪತಿಯಾಗಿದ್ದನು. ಯೇಸುವನ್ನು ಮರಣದಂಡನೆ ಒಪ್ಪಿಸುವ ಅಧಿಕಾರವನ್ನು ಹೊಂದಿದ್ದನು (ಲೂಕ 13:31; 23:6-16), ಸ್ನಾನಿಕನಾದ ಯೋಹಾನನಿಗೆ ಅದನ್ನೇ ಮಾಡಿದನು (14:1-12).

## ಪಾಠಗಳು

## "ಸಬ್ಬತ್ ದಿನವನ್ನು ಜ್ಞಾಪಕಮಾಡಿಕೊಳ್ಳಿರಿ" (12:1-14)

ಸಬ್ಬತ್ ಆಚರಿಸುವದು ಹಳೆ ಒಡಂಬಡಿಕೆಯ ಒಂದು ನಿಯಮವಾಗಿದೆ ಅದನ್ನು ರದ್ದುಪಡಿಸಲಾಗಿದೆ (ಎಫೆಸ 2:13-16; ಕೊಲಸ್ಸೆ 2:14). ಕ್ರೈಸ್ತರು ಯಾವುದೇ ಧರ್ಮಶಾಸ್ತ್ರ ನಿಯಮವನ್ನು, ಸಬ್ಬತ್ ನಿಯಮ ಒಳಗೊಂಡಂತೆ ಯಾವದನ್ನು ಅನುಸರಿಸಬೇಕಾದ ಅವಶ್ಯಕತೆ ಇರುವದಿಲ್ಲ. ದಶಾಜ್ಞೆಗಳಲ್ಲಿ ನಾಲ್ಕನೆ ಆಜ್ಞೆ ಕ್ರಿಸ್ತನ ನಿಯಮದಲ್ಲಿ ಸಂಯೋಜನೆಗೊಳ್ಳುವದಿಲ್ಲ (ವಿಮೋಚನಕಾಂಡ 20:8). ಕೆಲವು ಜನರು ಭಾನುವಾರವು "ಕ್ರೈಸ್ತರ ಸಬ್ಬತ್" ಎಂದು ಮಾತಾಡುವರು, ಆದರೆ ಅಂಥಹ ವಿಷಯ ಇರುವದಿಲ್ಲ. ಸಬ್ಬತ್ ದಿನವಾರದ ಎಳನೆಯ ದಿನವಾಗಿತ್ತು, ಅದು ಶನಿವಾರವಾಗಿತ್ತು (ವಿಮೋಚನಕಾಂಡ 20:8-11). ಕ್ರೈಸ್ತರಿಗೆ ಆರಾಧನೆಯ ದಿನ ಭಾನುವಾರ, ಅದು ವಾರದ ಮೊದಲನೆಯ ದಿನವಾಗಿದೆ (ಅಪೊಸ್ತಲರ ಕೃತ್ಯಗಳು 20:7; 1 ಕೊರಿಂಥ 16:2), ಅದನ್ನು ಕರ್ತನ ದಿನವೆಂದು ಕರೆಯಲಾಗಿದೆ.ನಿಜಾಂಶವೇನೆಂದರೆ, ಆದಿ ಕ್ರೈಸ್ತರು ವಿಶೇಷ ದಿನ ಹೊಂದಿದ್ದರು ಮತ್ತು ಆರಾಧನೆಗೆ ನಿರ್ಧಿಷ್ಟವಾದ ಕಾರ್ಯಕ್ರಮವನ್ನು ಹೊಂದಿದ್ದರು ಎನ್ನುವ ವಾಸ್ತವವು ಇತಿಹಾಸದ ಬರವಣಿಗೆಯಿಂದ ದೃಢಗೊಳ್ಳುತ್ತದೆ.[13]

ವಾರದ ಮೊದಲನೆಯ ದಿನವು ಕ್ರೈಸ್ತರಿಗೆ ಆರಾಧನೆಯ ದಿನವಾಯಿತ್ತು. ಯಾಕೆಂದರೆ ಈ ದಿನವೇ ಯೇಸು ಸಮಾಧಿಯಿಂದ ಎದ್ದು ಬಂದಿರುವ ದಿನವಾಗಿತ್ತು (28:1-6; ಲೂಕ 24:1-6; ಯೋಹಾನ 20:1-9). ನಮಗೆ ಇಲ್ಲಿಯವರೆಗೆ ತಿಳಿದಂತೆ, ಪುನರುತ್ಥಾನದ ತರುವಾಯ ಯೇಸು ಕಾಣಿಸಿಕೊಂಡಿರುವದು ಅದು ನಿರ್ಧಿಷ್ಟವಾದ ದಿನ ವಾರದ ಮೊದಲನೆ ದಿನ ಪುನರುತ್ಥಾನದ ತರುವಾಯ ಯೇಸು ಕಾಣಿಸಿಕೊಂಡಿರುವದು ಅದು ನಿರ್ಧಿಷ್ಟವಾದ ದಿನ ವಾರದ ಮೊದಲನೆ ದಿನದಂದು ಸಂಭವಿಸಿರುತ್ತದೆಂದು ಹೇಳುವ ಎಲ್ಲಾ ದಾಖಲೆಗಳು ಸಹಕರಿಸುತ್ತವೆ. ಕ್ರೈಸ್ತರು ಭಾನುವಾರದ ದಿನದಂದು ಪ್ರಾರ್ಥನೆಗೆ ಕೂಡಿಬರುವರು. ದೇವರಿಗೆ ಸ್ತೋತ್ರ ಗೀತೆಗಳನ್ನು ಹೇಳುವದು, ದೇವರ ವಾಕ್ಯದಿಂದ ಸಂದೇಶವನ್ನು ಕೇಳುವದು, ಅವರ ಹಣವನ್ನು ಕೊಡುವದು, ಮತ್ತು ಕರ್ತನ ಭೋಜನೆಯ ಆಚರಣೆಯನ್ನು ಆ ದಿನವೇ ಮಾಡುತ್ತಾರೆ.

ಕ್ರೈಸ್ತರು ಕರ್ತನ ದಿನದಂದು ಕೂಡಿಬರಬೇಕು, ಅಪೊಸ್ತಲರ ಉದಾಹರಣೆ ಮುಖಾಂತರ ಮತ್ತು ನೇರವಾದ ಆಜ್ಞೆ ಮುಖಾಂತರವಾಗಿಯೂ ಹೊಸ ಒಡಂಬಡಿಕೆಯು ಬೋಧಿಸುತ್ತದೆ. ಪ್ರತಿ ವಾರದ ಮೊದಲನೆ ದಿನವು ಕರ್ತನ ಭೋಜನದಲ್ಲಿ ಭಾಗ ತೆಗೆದುಕೊಳ್ಳುವುದಾದರೆ, ಆದಿ ಸಭೆಯ ಆಚರಣೆಯಂತೆ ಆಗುತ್ತದೆ (ಅಪೊಸ್ತಲರ ಕೃತ್ಯಗಳು 20:7; 1 ಕೊರಿಂಥ 11:20-34; 16:2), ತರುವಾಯ ಅದರಲ್ಲಿ ಭಾಗವಹಿಸುವಂತೆ ನಮಗೆ ಆಜ್ಞೆಕೊಟ್ಟ ರೀತಿಯಲ್ಲಿ ಇರುತ್ತದೆ. ಇಬ್ರಿಯ ಬರಹಗಾರನು ಯೆಹೂದ್ಯ ಕ್ರೈಸ್ತರಿಗೆ ಪ್ರೋತ್ಸಾಹಿಸಲು ಹೀಗೆ ಬರೆಯುತ್ತಾನೆ, "ಸಭೆಯಾಗಿ ಕೂಡಿಕೊಳ್ಳುವದನ್ನು ಕೆಲವರು ರೂಢಿಯಾಗಿ ಬಿಟ್ಟಿರುವ ಪ್ರಕಾರ ನಾವು ಬಿಟ್ಟು ಬಿಡದೆ ಒಬ್ಬರನ್ನೊಬ್ಬರು ಎಚ್ಚರಿಸೋಣ. ಕರ್ತನ ಪ್ರತ್ಯಕ್ಷತೆ ದಿನವು ಸಮೀಪಿಸುತ್ತದೆಂದು ನೀವು ನೋಡುವದರಿಂದ ಇದನ್ನು ಮತ್ತಷ್ಟು ಮಾಡಿರಿ" (ಇಬ್ರಿಯ 10:25). ಅದರಿಂದ

ಆದಿ ಕ್ರೈಸ್ತರು ವಾರದ ಮೊದಲನೆ ದಿನ ಕೂಡಿಬರುತ್ತಿದ್ದರು - ಈ ಅಂಶವನ್ನು ಹೊಸ ಒಡಂಬಡಿಕೆಯಿಂದ ಮತ್ತು ಇತರೆ ಇತಿಹಾಸಗಳ ದಾಖಲೆಗಳಿಂದಲೂ ಪ್ರಮಾಣಿಕರಿಸಲಾಗಿದೆ - ಇಬ್ರಿಯಾ ಪುಸ್ತಕದಲ್ಲಿ ತಿಳಿಸಿರುವ ಕೂಡಿಕೆಯೂ ಸ್ಪಷ್ಟವಾಗಿ ಇದೆಯಾಗಿತ್ತು. ಪ್ರೇರೇಪಣೆಯ ಬರಹಗಾರನು ತನ್ನ ಓದುಗರು ಕರ್ತನ ದಿನದಂದು ಸಭೆಗೆ ಹೋಗುವದನ್ನು ಕೂಡಿಬರುವ ಅಭ್ಯಾಸವನ್ನು ಬಿಟ್ಟು ಬಿಡಬಾರದೆಂದು ಆತನ ಆಸೆಯಾಗಿರುತ್ತದೆ.

## "ಮನುಷ್ಯ ಕುಮಾರನು" (12:8)

ಯೇಸುವಿನ ಅನೇಕ ಸಾರಿ "ಮನುಷ್ಯ ಕುಮಾರನು" ಎನ್ನುವ ತಲೆಬರಹ ಕೊಡಲಾಗಿದೆ, ಹೊಸ ಒಡಂಬಡಿಕೆಯಲ್ಲಿ ಎಂಬತ್ತೆಂಟು ಸಾರಿ ಕೊಡಲ್ಪಟ್ಟಿದೆ; ಮತ್ತು ಕೆಲವರನ್ನು ಹೊರತು ಪಡಿಸಿದರೆ, ಹೆಚ್ಚಾಗಿ ಕ್ರಿಸ್ತನು ಈ ಶಬ್ದವನ್ನು ಉಪಯೋಗಿಸಿದ್ದಾನೆ. ಆತನಿಗೆ ಶಿರೋನಾಮೆ ಆರಿಸಿಕೊಳ್ಳಲು ಕ್ರಿಸ್ತನಿಗೆ ಎಲ್ಲಾ ಹಕ್ಕು ಆತನಿಗಿದೆ "ದೇವಕುಮಾರನು" ಎಂಬುದಾಗಿಯೂ, ಆದರೆ ಆತನು ಸ್ಪಷ್ಟವಾಗಿ ಪ್ರಧಾನ್ಯತೆ ಕೊಟ್ಟಿರುವದು "ಮನುಷ್ಯ ಕುಮಾರನು" ಎಂದು ಹೇಳುವದಕ್ಕಾಗಿ ಈ ವಾಕ್ಯ ಭಾಗವನ್ನು ಆತನು ಉಪಯೋಗಿಸಿರುವಾಗ ಮುಖ್ಯವಾದ ಹೇಳಿಕೆಯನ್ನು ಕೊಡುವದಕ್ಕಾಗಿಯೇ ಯೇಸು ಇದನ್ನು ಉಪಯೋಗಿಸಿದನು ಎಂದು ಸೂಚಿಸುವಂಥದ್ದಾಗಿದೆ. ಒಂದು ಕಡೆ ಆತನ ಸಂಪೂರ್ಣ ಮಾನವಿಯತೆಯನ್ನು ಒತ್ತಿ ಹೇಳುತ್ತದೆ. ಇನ್ನೊಂದು ಕಡೆ ಆತನ ಅಧಿಕಾರ ಮತ್ತು ಬಿಡುಗಡೆಯ ಸೇವೆಯನ್ನು ಒತ್ತಿ ಹೇಳುತ್ತದೆ. ದೇವರು ಮಾನವನಾದನು ಅದರಿಂದ ನಮ್ಮನ್ನು ಆತನೊಂದಿಗೆ ಸರಿಯಾದ ಒಂದು ಸಂಬಂಧದಲ್ಲಿ ಬರುವಂತೆ ಮಾಡಿ ಆತನು ನಮಗೆ ಸಂಬಂಧಪಟ್ಟವನಾಗಿದ್ದಾನೆ ಅದರಿಂದ ಆತನ ಅಧಿಕಾರವು ನಮ್ಮ ಒಳತಿಗಾಗಿ ಉಪಯೋಗಿಸಿಕೊಳ್ಳಬಹುದಾಗಿದೆ.

---

ಟಿಪ್ಪಣೆಗಳು

[1]Douglas R. A. Hare, *Matthew,* Interpretation (Louisville: John Knox Press, 1993), 130. [2]Mishnah *Shabbath* 7.2. [3]David Hill, *The Gospel of Matthew,* The New Century Bible Commentary (Grand Rapids, Mich.: Wm. B. Eerdmans Publishing Co., 1972), 210. [4]"ಸಬ್ಬತ್‌ನ್ನು ಬಲಿ ಅರ್ಪಣೆಸೇವೆ ತಳ್ಳಿಹಾಕುತ್ತದೆ" (Talmud *Shabbath* 132b). [5]Hare, 132. [6]J. W. McGarvey, *The New Testament Commentary, vol. 1, Matthew and Mark* (N.p., 1875; reprint, Delight, Ark.: Gospel Light Publishing Co., n.d.), 104. [7]Ibid., 105. [8]ನೋಡಿರಿ Talmud *Shabbath* 128b; *Baba Metzia* 32b. ಕುಮ್ರಾನ್ ಸಮಾಜವು ಬಹಳ ಕಟ್ಟು ನಿಟ್ಟಾಗಿತ್ತು ಎಂದು ಮೃತ ಸಮುದ್ರದ ಸುರಳಿಗಳು ಪ್ರಕಟಿಸುತ್ತವೆ: "ಒಂದು ಪಶುಪ್ರಾಣಿಗೆ ಸಬ್ಬತ್ ದಿನದಂದು ಹೆರಿಗೆ ಯಾಗುವಂತೆ ಯಾರೊಬ್ಬರು ಸಹಾಯ ಮಾಡಲು ಆಗುವದಿಲ್ಲ, ಮತ್ತು ಪ್ರಾಣಿಯು ನೀರಿನ ತೊಟ್ಟಿಯಲ್ಲಿ ಅಥವಾ ಕುಣಿಯಲ್ಲಿ ಬಿದ್ದಿದ್ದರೆ, ಅವನು ಅದನ್ನು ಸಬ್ಬತ್ ದಿನದಂದು ಹೊರಗೆ ಎಳೆಯುವದಿಲ್ಲ ... ಆದರೆ ಯಾವೊಬ್ಬ ವ್ಯಕ್ತಿ ನೀರಿನಲ್ಲಿ ಅಥವಾ ಬೆಂಕಿಯಲ್ಲಿ ಬಿದ್ದಾಗ, ಅವನನ್ನು ಹಗ್ಗದಿಂದ ಅಥವಾ ನಿಚ್ಚಣಿಕೆಯಿಂದ ಅಥವಾ (ಇನ್ನು ಬೇರೆ ಸುರಕ್ಷಿತವಾದ ವಸ್ತುಗಳಿಂದ) ನಿತ್ಯ ಉಪಯೋಗಿಸುವ ವಸ್ತುಗಳಿಂದ ಮೇಲೆ ಎತ್ತುವರು" (*Damascus Rule* 11.13, 14, 16, 17). [9]"ಜೀವನ ಅಪಾಯವು ಸಬ್ಬತ್ ದಿನದ ಉಲ್ಲಂಘನೆಯನ್ನು ರದ್ದುಪಡಿಸುತ್ತದೆ" (Mishnah *Yoma* 8.6). [10]Mishnah *Shabbath* 18.3.

[11]ಉದಾಹರಣೆಗಾಗಿ, ಯಾವುದಾದರು ಒಂದು ಮುರಿದ ಕಾಲನ್ನು ಸರಿಪಡಿಸುವದು ಸಬ್ಬತ್ ದಿನದಂದು ನಿಯಮಬಾಹಿರವಾಗಿದೆ. (Mishnah *Shabbath 22.6.*) [12]Ibid., 18.3—

19.5. [13]Pliny *Letters* 10.96; Justin Martyr *Apology* 1.67; Clement of Alexandria *Miscellanies* 6.14; *The Instructor* 3.11.